<u>ದಿನಾಂಕ **11.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲು ಃ ಅರ್ಜಿದಾರರ ಪರ ವಕೀಲರಿಂದ</u>

1950 ರ ಕ್ರಯಪತ್ರವನ್ನು ಪ್ರಶ್ನಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ರುದ್ರಮ್ಮ ನವರು ದಾವಾ ನಡೆಯುತ್ತಿರುವಾಗಲೇ ಮೃತ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅವರು ಮೃತಪಟ್ಟಿದ್ದ ನಂತರ ಅವರ ವಾರಸುದಾರರರನ್ನು ದಾವೆಯಲ್ಲಿ ತಂದಿರುವುದಿಲ್ಲ ಎಂದರೆ ಸರಿಯಲ್ಲ. ರುದ್ರಮ್ಮರವರು ದಾವಾ ನಡೆಯುವಾಗಲೇ ಪುಟ್ಟಮ್ಮರವರಿಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ರುದ್ರಮ್ಮರವರ ವಾರಸುದಾರರನ್ನು ಪುಟ್ಟಮ್ಮರವರನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಅಲ್ಲ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. FDP ಅಲ್ಲಿ ಅರ್ಜಿದಾರರು ಮೋಹನ್ ಒಬ್ಬರೇ ಎಂದರೆ ಸರಿ. ದಾವೆಯನ್ನು ಸಲ್ಲಿಸಿದ ವಾದಿಗಳು FDP ಅನ್ನು ಒಟ್ಟಿಗೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಿಆರ್ 1 ಅನ್ನು ಉದ್ದೇಶಪೂರ್ವಕವಾಗಿ ನೋಟಿಸನ್ನು ತಿರಸ್ಕಾರ ಮಾಡಿರುತ್ತಾರೆಂದು ಹಾಕಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರೇಮ, ಸವಿತಾ ಮತ್ತು ಮಣಿ ನನ್ನ ತಂದೆಯ ತಂಗಿಯರು. ರವಿ ನನ್ನ ತಂದೆಯ ತಮ್ಮ. FDP ಪ್ರಕರಣದ commissioner report ಅನ್ನು ಈ ಪ್ರಕರಣದಲ್ಲಿ ಉದ್ದೇಶಪೂರ್ವ ಕವಾಗಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. FDP ಅಲ್ಲಿ ಯಾರು ಯಾರಿಗೆ ಯಾವ ಯಾವ ಭಾಗ ಎಂದು ನಿರ್ದಿಷ್ಟವಾಗಿ ಹಂಚಿಕೆ ಅಗಿರುವುದಿಲ್ಲ ಹಾಗೂ ಅದರ ಬಗ್ಗೆ ಆದೇಶ ಆಗಿರುವುದಿಲ್ಲ ಎಂದರೆ ಸರಿ. ಅಂತಿಮ ಡಿಕ್ರಿಯ ಆದೇಶದ ಮೇಲೆ ಮೇಲ್ಮನವಿದಾರರು ಈ ಅಪೀಲನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ . ಈ ಮೇಲ್ಮನವಿ ಸಲ್ಲಿಸಿದ ಒಂದು ವಾರದ ಹಿಂದೆ FDP ಮತ್ತು ಅಸಲು ದಾವೆಯ ಡಿಕ್ರಿಯ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿ. FDP ಅಲ್ಲಿ ಕಮೀಷನರ್ ರವರು ಅಳತೆ ಮಾಡಲು ಬಂದಾಗಲೇ ವಾಸ್ತವಾಂಶ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಮೇಲ್ಮನವಿದಾರರರಿಗೆ ನ್ಯಾಯಾಲಯದ ವಿವರಣೆಯ ಬಗ್ಗೆ ಖುದ್ದು ಮಾಹಿತಿ ಇಲ್ಲ ಎಂದರೆಸ ರಿಯಲ್ಲ. ಮೇಲ್ಮನವಿದಾರರ ಗಮನಕ್ಕೆ ಬಾರದೆ ಸುಳ್ಳು ಸಂಗತಿಯನ್ನು ಸೃಷ್ಟಿಸಿ ಸುಳ್ಳು ದಾವೆಯನ್ನು ಹಾಕಿ ಡಿಕ್ರಿಯನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ, ಮೇಲ್ಮನವಿದಾರರ ಆಸ್ತಿಯನ್ನು ಲಪಟಾಯಿಸಲು ಕಾಲ ವಿಳಂಬವಾದ ಅರ್ಜಿಗೆ ಸುಳ್ಳು ತಕರಾರು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಮೇಲ್ಮನವಿದಾರರ ಅರ್ಜಿ ಸಕಾರಣದಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.